ಶ್ರೀ ಬಿ. ರಾಚಯ್ಯ.—ಸ್ವಾಮಿ, ಪ್ರತ್ಯೇಕ ನೋಟೀಸ್ ಕೊಟ್ಟರೆ ನಾನು ಉತ್ತರ ತರಿಸಿ ಕೊಡುತ್ತೇನೆ.

ಮುಖ್ಯ ಮಂತ್ರಿಗಳ ಪ್ರವಾಸದ ಬಗ್ಗೆ.

೧೨೫೮. ಶ್ರೀ ಎನ್. ಎಂ. ಅಡ್ಯಂತಾಯ್ಯ (ಸುರತ್ಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧ನೇ ಏಪ್ರಿಲ್ ೧೯೫೬ ರಿಂದ ೨೮ನೇ ಫೆಬ್ರುವರಿ ೧೯೫೮ರ ವರೆಗೆ ರಾಜ್ಯದ ಮುಖ್ಯ ಮಂತ್ರಿಗಳು ಹೊರ ರಾಜ್ಯಗಳಲ್ಲಿ, ವಿದೇಶಗಳಲ್ಲಿ, ರಾಜ್ಯದ ರಾಜಧಾನಿಯನ್ನು ಹೊರತುಪಡಿಸಿ ರಾಜ್ಯದ ವಿವಿಧೆಡೆ ಪ್ರವಾಸ ಮಾಡಿದ ಪ್ರತ್ಯೇಕ ವಿವರಗಳನ್ನು ಒದಗಿಸುವುದೇ ?

ಆ) ಈ ಪ್ರವಾಸಗಳಿಗೆ ಪಡೆದ ಪ್ರಯಾಣ ಭತ್ಯೆ ಹಾಗೂ ಇತರ ಭತ್ಯೆಗಳ ಒಟ್ಟು ಮೊಬಲಗು ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ರೂ. ೨,೪೯,೧೭೬-೮೦

ಅನುಬಂಧ

೧ನೇ ಏಪ್ರಿಲ್ ೧೯೫೬ ರಿಂದ ೨೮ನೇ ಫೆಬ್ರುವರಿ ೧೯೫೮ರ ವರೆಗೆ ರಾಜ್ಯದ ಮುಖ್ಯ ಮಂತ್ರಿಗಳು ಹೊರ ರಾಜ್ಯಗಳಲ್ಲಿ, ವಿದೇಶಗಳಲ್ಲಿ, ರಾಜ್ಯದ ರಾಜಧಾನಿಯನ್ನು ಹೊರತುಪಡಿಸಿ ರಾಜ್ಯದ ವಿವಿಧೆಡೆ ಪ್ರವಾಸ ಮಾಡಿದ ಪ್ರತ್ಯೇಕ ವಿವರಗಳು.

ಹೊರ ರಾಜ್ಯಗಳಲ್ಲಿ ಮಾಡಿರುವ ಪ್ರವಾಸ

ಪ್ರವಾಸ ಮಾಡಿರುವ ದಿನಾಂಕ		ಸ್ಥಳ
೧೯೫೬		
ಏಪ್ರಿಲ್ ೧-೯	...	ದೆಹಲಿ
ಜುಲೈ ೧೭-೧೮	...	ತಿರುಪತಿ ಮತ್ತು ಕಪಲಿ
೨೭-೩೧	...	ದೆಹಲಿ
ಆಗಸ್ಟ್ ೪-೬	...	ದೆಹಲಿ ಮತ್ತು ಹೈದರಾಬಾದ್
೨೭-೨೬	...	ದೆಹಲಿ ಮತ್ತು ಮುಂಬಯಿ
ಸೆಪ್ಟಂಬರ್ ೪-೫	...	ಹೈದರಾಬಾದ್
೮-೧೩	...	ದೆಹಲಿ
೨೮-೩೦	...	ಮುಂಬಯಿ

೧		೨
ಅಕ್ಟೋಬರ್ ೧–೨	...	ಮುಂಬಯಿ
೧೭–೧೯	...	ದೆಹಲಿ
೨೮–೩೧	...	ದೆಹಲಿ
ನವೆಂಬರ್ ೩೦	...	ದೆಹಲಿ, ಪಾಟ್ನಾ
ಡಿಸೆಂಬರ್ ೧–೨	...	ದೆಹಲಿ
೧೨–೧೪	...	ದೆಹಲಿ
೧೫–೧೬	...	ದೆಹಲಿ
೩೦–೩೧	...	ದೆಹಲಿ
೧೯೮೭		
ಜನವರಿ ೧–೨	...	ದೆಹಲಿ
೮–೧೧	...	ದೆಹಲಿ
೧೩–೧೫	...	ಮದರಾಸು
೧೫–೨೦	...	ದೆಹಲಿ–ಶ್ರೀನಗರ
೨೩–೨೫	...	ಮದರಾಸು, ದೆಹಲಿ
೨೬–೨೮	...	ಮುಂಬಯಿ
ಫೆಬ್ರವರಿ ೨–೬	...	ದೆಹಲಿ
೧೩–೧೬	...	ದೆಹಲಿ
೨೮–೨೯	...	ಮದರಾಸು
ಮಾರ್ಚ್ ೧–೨	...	ಮದರಾಸು
೬–೯	...	ದೆಹಲಿ
೧೩–೧೭	...	ಕೇರಳ
೧೯–೨೧	...	ಉತ್ತರ ಪ್ರದೇಶ
೨೮–೨೯	...	ದೆಹಲಿ
೩೧	...	ದೆಹಲಿ
ಏಪ್ರಿಲ್ ೧–೨	...	ಪಂಜಾಬ್
೬–೭	...	ಮದರಾಸು
೯–೧೧	...	ದೆಹಲಿ
೧೩–೧೫	...	ಮುಂಬಯಿ ,ದೆಹಲಿ
೧೭–೧೮	...	ದೆಹಲಿ
೨೩–೨೬	...	ದೆಹಲಿ
ಜೂನ್ ೨೦–೨೪	...	ದೆಹಲಿ
೨೯–೩೦	...	ಮುಂಬಯಿ

೧		೨
ಜುಲೈ ೧೬–೨೦	...	ದೆಹಲಿ
ಆಗಸ್ಟ್ ೧೨–೧೪	...	ದೆಹಲಿ
೨೩–೨೭	...	ದೆಹಲಿ
ಸೆಪ್ಟಂಬರ್ ೨–೪	...	ದೆಹಲಿ
೮–೧೦	...	ದೆಹಲಿ
೨೧–೨೪	...	ದೆಹಲಿ
ಅಕ್ಟೋಬರ್ ೧೦–೧೩	...	ದೆಹಲಿ, ವಾರಣಾಸಿ
೧೪–೧೬	...	ದೆಹಲಿ, ಲಕ್ನೋ
ನವೆಂಬರ್ ೪–೬	...	ದೆಹಲಿ
೨೩–೩೦	...	ದೆಹಲಿ, ಮುಂಬಯಿ
ಡಿಸೆಂಬರ್ ೨–೪	...	ದೆಹಲಿ, ಮುಂಬಯಿ
೧೪–೧೭	...	ಕಲ್ಕತ್ತ
೧೦–೧೨	...	ದೆಹಲಿ
೨೪–೨೬	...	ದೆಹಲಿ
೨೯–೩೧	...	ಗೋವಾ
೧೯೬೮		
ಜನವರಿ ೧೩–೧೬	...	ದೆಹಲಿ
೨೯–೩೧	...	ದೆಹಲಿ
ಫೆಬ್ರವರಿ ೧೦–೧೭	...	ದೆಹಲಿ, ಮದರಾಸು,
	...	ಉತ್ತರ ಪ್ರದೇಶ
೧೯–೨೦	...	ಈರೋಡ್
೨೬–೨೯	...	ದೆಹಲಿ, ಭುವನೇಶ್ವರ
	...	ಕಟಕ್
	ವಿದೇಶ ಪ್ರವಾಸ	
೨–೫–೧೯೬೭ ರಿಂದ ೧೬–೬–೧೯೬೭	...	ಅಮೇರಿಕ, ಪಶ್ಚಿಮ ಜರ್ಮನಿ ಇಂಗ್ಲೆಂಡ್, ಆಸ್ಟ್ರೀಯ, ಕೆನಡಾ, ಮತ್ತು ಸ್ವಿಟ್ಜರ್ಲೆಂಡ್ ದೇಶಗಳು.

೧	೨
	ರಾಜ್ಯದಲ್ಲಿನ ಪ್ರವಾಸ
೧೯೮೭	
ಆಗಸ್ಟ್ ೭–೮	... ಬೀದರ್, ಬಳ್ಳಾರಿ ಮತ್ತು ಗುಲ್ಬರ್ಗಾ.
೧೧–೧೩	... ಕೋಲಾರ, ಮೈಸೂರು
೨೨–೧೫	... ಉತ್ತರ ಕನ್ನಡ ಜಿಲ್ಲೆ
೨೯–೮–೧೯೮೭	... ಮೈಸೂರು
ಸೆಪ್ಟೆಂಬರ್ ೧–೩	... ದಕ್ಷಿಣ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳು.
ಅಕ್ಟೋಬರ್ ೧೧–೧೩	... ಬೆಂಗಳೂರು ಜಿಲ್ಲೆ ಮತ್ತು ಮೈಸೂರು.
೧೫–೧೦–೧೯೮೭	... ಬೆಂಗಳೂರು ಜಿಲ್ಲೆ
೨೦–೧೦–೧೯೮೭	... ಬೆಳಗಾಂ ಜಿಲ್ಲೆ
೨೧–೧೦–೧೯೮೭	... ಬೆಂಗಳೂರು ಜಿಲ್ಲೆ
ನವೆಂಬರ್ ೫–೭	... ತುಮಕೂರು, ಚಿಕ್ಕಮಗಳೂರು ಹಾಸನ, ಕೊಡಗು, ಮೈಸೂರು ಮಂಡ್ಯ, ಮತ್ತು ಬೆಂಗಳೂರು ಜಿಲ್ಲೆಗಳು.
೧೮–೧೯	... ರಾಯಚೂರು ಜಿಲ್ಲೆ
೨೪–೨೬	... ಬೆಂಗಳೂರು ಜಿಲ್ಲೆ
ಡಿಸೆಂಬರ್ ೩	... ಮೈಸೂರು, ಮಂಡ್ಯ ಚಿಕ್ಕಮಗಳೂರು, ಹಾಸನ ತುಮಕೂರು ಮತ್ತು ಬೆಂಗಳೂರು ಜಿಲ್ಲೆ.
೫	... ಆನೇಕಲ್
೬	... ದೊಡ್ಡಬಳ್ಳಾಪುರ
೮	... ಬಿಜಾಪುರ ಮಂತ್ತು ಬೆಳಗಾಂ ಜಿಲ್ಲೆಗಳು
೧೦	... ಚಿತ್ರದುರ್ಗ
೧೨	... ಮೈಸೂರು
೧೮–೨೦	... ಉತ್ತರ ಕನ್ನಡ, ಶಿವಮೊಗ್ಗ ಚಿಕ್ಕಮಗಳೂರು, ಹಾಸನ ಬಳ್ಳಾರಿ, ಧಾರವಾಡ, ಬೆಳಗಾಂ ಬೀದರ್ ಮತ್ತು ಗುಲ್ಬರ್ಗಾ

೧		೨
೧೯೬೭		
ಫೆಬ್ರುವರಿ ೧೨–೧೩	...	ಶಿವಮೊಗ್ಗ, ಚಿಕ್ಕಮಗಳೂರು
೧೮	...	ಬೆಂಗಳೂರು ಜಿಲ್ಲೆ
೨೮	...	ಬೆಂಗಳೂರು ಜಿಲ್ಲೆ
ಏಪ್ರಿಲ್ ೧೬–೧೭	...	ಬೆಳಗಾಂ ಮತ್ತು ಧಾರವಾಡ
ಸೆಪ್ಟಂಬರ್	...	ಮೈಸೂರು
ಅಕ್ಟೋಬರ್ ೧–೩	...	ಮೈಸೂರು
೯	...	ಬೆಂಗಳೂರು ಗ್ರಾಮಾಂತರ ಜಿಲ್ಲೆ
೧೬–೨೦	...	ಬೀದರ್ ಮತ್ತು ಗುಲ್ಬರ್ಗಾ
ನವೆಂಬರ್ ೯–೧೩	...	ಬಿಜಾಪುರ ಮತ್ತು ಬೆಳಗಾಂ ಜಿಲ್ಲೆ
ಡಿಸೆಂಬರ್ ೮–೯	...	ಚಿಕ್ಕಮಗಳೂರು ಜಿಲ್ಲೆ
೧೯೬೮		
ಜನವರಿ ೨೩	...	ಆದಿ ಚುಂಚನಗಿರಿ
೩೧	...	ಹುಬ್ಬಳ್ಳಿ
ಫೆಬ್ರುವರಿ ೨೩	...	ಹರಪನಹಳ್ಳಿ

ಶ್ರೀ ಎನ್. ಎಂ. ಅಡ್ಕಂತಾಯ.—ಮಾನ್ಯ ಅಧ್ಯಕ್ಷರೇ, ಸುಮಾರು ಒಂದೂ ಮುಕ್ಕಾಲು ವರ್ಷದಲ್ಲಿ ೬೪೦ ದಿವಸ ಈ ರಾಜ್ಯದ ಹೊರಗಡೆ ಪ್ರವಾಸವನ್ನು ಮಾನ್ಯ ಮುಖ್ಯಮಂತ್ರಿಗಳು ಕೈಗೊಂಡಿದ್ದಾರೆ ಆದರೆ ಬರೀ ೬೧–೭೦ ದಿವಸಗಳು ಮಾತ್ರ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಇಷ್ಟು ದಿವಸ ರಾಜ್ಯದ ಹೊರಗಡೆ ಪ್ರವಾಸ ಮಾಡಿದ್ದರಿಂದ ನಮ್ಮ ರಾಜ್ಯದ ಅಭಿವೃದ್ಧಿಗೆ ಏನಾದರೂ ಪ್ರಯೋಜನ ಆಗಿದೆಯೇ ? ಎರಡನೆಯದಾಗಿ ಅವರು ಹೊರದೇಶಗಳಲ್ಲಿ ಪ್ರವಾಸ ಮಾಡಿದಂತಹ ಸಂದರ್ಭದಲ್ಲಿ ಅಂದರೆ ಇಂಗ್ಲೆಂಡ್, ಅಮೇರಿಕಾ ದೇಶಗಳಲ್ಲಿ ಏನು ಹೇಳಿದ್ದಾರೆಂದರೆ 'Pakistan is not trying to destabilise India' If he gives such irresponsible statements .....

(Interruption)

ಅಧ್ಯಕ್ಷರು. —ಇದು ಪ್ರಶ್ನೆಗೆ ಸಂಬಂಧ ಬರುವುದಿಲ್ಲ, ತಾವು ನೇರವಾಗಿ ಪ್ರಶ್ನೆ ಕೇಳಿ ?

ಶ್ರೀ ಎನ್. ಎಂ. ಅಡ್ಕಂತಾಯ.— ನಾನು ಪ್ರಶ್ನೆ ಕೇಳುತ್ತಿದ್ದೇನೆ. ಅದೂ ಮೂಲಭೂತವಾದ, ಬಹಳ ಪ್ರಾಮುಖ್ಯವಾದ ವಿಷಯದ ಬಗ್ಗೆ ಪ್ರಶ್ನೆ ಕೇಳುತ್ತಿದ್ದೇನೆ. If he gives such irresponsible statements will it not hamper and weaken the integrity of the country He is holding a very responsible position. We cannot take this lightly. He is representing Karnataka. He is giving such statements at the behest of certain other countries. Does it not tantamount in our minds that he is a CIA agent ?

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಿ ?

ಶ್ರೀ ಎನ್. ಎಂ. ಅಡ್ಕಂತಾಯ.—ನಾನು ಅದೇ ಪ್ರಶ್ನೆಯನ್ನೇ ಕೇಳುತ್ತಿರುವುದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ನನ್ನ ಪ್ರವಾಸದ ಬಗ್ಗೆ ಕೇಳುತ್ತಿದ್ದಾರೋ ಅಥವಾ ಸಿ.ಐ.ಎ. ಏಜೆಂಟ್ ಬಗ್ಗೆ ಕೇಳುತ್ತಿದ್ದಾರೋ ಗೊತ್ತಿಲ್ಲ. ನಾನೂ ಪ್ರವಾಸ ಮಾಡಿದ ಬಗ್ಗೆ ಹೇಳುವುದಾದರೆ, ಎರಡು ವರ್ಷದ ಅವಧಿಯಲ್ಲಿ ಒಟ್ಟು ೩೧೭ ದಿವಸ ನಾನು ಪ್ರವಾಸದ ಮೇಲೆ ಇದ್ದೇನೆ. ಆದರಲ್ಲಿ ೬೮ ದಿವ ರಾಜ್ಯದಲ್ಲಿ ಪ್ರವಾಸ ಮಾಡಿದ್ದೇನೆ. ಇನ್ನು ಉಳಿದ ದಿನಗಳಲ್ಲಿ ರಾಜ್ಯದ ಹೊರಗಡೆ ಪ್ರವಾಸ ಮಾಡಿದ್ದೇನೆ. ಇದರ ಬಗ್ಗೆ ನಾವು ಕೊಟ್ಟಿರುವ ಮಾಹಿತಿಯೊಳಗೆ ಸ್ಪಷ್ಟವಾಗಿದೆ. ಯಾವತ್ತೂ ರಾಜ್ಯದಲ್ಲಿ ಪ್ರವಾಸ ಮಾಡಬೇಕು ಯಾವ ಕಾರಣಕ್ಕೆ ರಾಜ್ಯದ ಹೊರಗಡೆ ಪ್ರವಾಸ ಮಾಡಬೇಕು ಎಂಬುದನ್ನು ತಿಳಿಯತಕ್ಕಂಥ ಬುದ್ಧಿ ನನಗಿದೆ. ರಾಜ್ಯದೊಳಗೆ ಪ್ರವಾಸ ಮಾಡತಕ್ಕ ಅಗತ್ಯ ಕಂಡಾಗ ರಾಜ್ಯದೊಳಗೆ ಪ್ರವಾಸ ಮಾಡಿದ್ದೇನೆ. ರಾಜ್ಯದ ಹೊರಗಡೆ ಹೋಗಬೇಕಾದ ಅಗತ್ಯ ಇದ್ದಾಗ ರಾಜ್ಯದ ಹೊರಗಡೆ ಹೋಗಿದ್ದೇನೆ. ಮಾನ್ಯ ಅಡ್ಯಂತಾಯರಿಗೆ ಸಿ.ಐ.ಎ. ಭೂತ ಹಿಡಿದ ಹಾಗೆ ಕಾಣುತ್ತದೆ. ಹೊರಗಡೆ ಹೋದಾಗ ನಾನು ಕೆಲವು ಪ್ರೆಸ್ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದುದು ನಿಜ. ಆದರೆ ದೇಶದ ಸಮಗ್ರತೆಗಾಗಲೀ, ದೇಶದ ಸ್ವಾತಂತ್ರ್ಯದ ಬಗ್ಗೆ ಗಂಡಾಂತರ ಬರತಕ್ಕಂಥ ವಿಷಯದಲ್ಲಿ ನಾನು ಸ್ಟೇಟ್‌ಮೆಂಟ್ ಕೊಟ್ಟಿಲ್ಲ. ಪಾಕಿಸ್ತಾನದಿಂದ ನಿಮ್ಮ ದೇಶಕ್ಕೆ ಏನಾದರೂ ಗಂಡಾಂತರ ಇಡಿಯೇ ಎಂದು ಕೇಳಿದ ಪ್ರಶ್ನೆಗೆ ಅಂಥ ಗಂಡಾಂತರ ಯಾವುದೂ ಇಲ್ಲವೆಂದು ನಾನು ಹೇಳಿದ್ದೇನೆ. ಅದು ನಿಜ. ಇವತ್ತೂ ಕೂಡ ನಾನು ಅದನ್ನೇ ಹೇಳುತ್ತೇನೆ. ಅಕಸ್ಮಾತ್ ಪಾಕಿಸ್ತಾನದವರು ನಮ್ಮ ದೇಶದ ಮೇಲೆ ಯುದ್ಧ ಮಾಡಿದರೆ, ಹಿಂದೆ ಯಾವ ರೀತಿ ಮೂರು ಸಲ ಅವರನ್ನು ಸೋಲಿಸಿದ್ದೆವೋ ಅದಕ್ಕಿಂತ ಉತ್ತಮವಾದ ರೀತಿಯಲ್ಲಿ ಅವರನ್ನು ಸೋಲಿಸತಕ್ಕಂಥ ತಾಕತ್ತು ನಮ್ಮಲ್ಲಿ ಇದೆ. ಆದ್ದರಿಂದ ಇದರಲ್ಲಿ ಸಿ.ಐ.ಎ. ವಿಷಯ ಏಕೆ ಬಂತು ಎಂಬುದು ಗೊತ್ತಾಗಲಿಲ್ಲ. ಕಾಂಗ್ರೆಸ್‌ನವರಿಗೆ ರಷ್ಯಾನೇ ಇನವಿಯಿಂದಲೂ ಸಿ.ಐ.ಎ. ಭೂತ ಹಿಡಿದಿರುವುದು ನಿಜ. ನಾನು ದೇಶದ ವಿರುದ್ಧವಾಗಿ ಮಾತನಾಡಿಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಮುಖ್ಯ ಮಂತ್ರಿಯವರಿಗೆ ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ. Pakistan is openly abetting and encouraging the terrorists and their activities. Even no less a person than the Director General of Border Security Force and the Inspector General of Police have of such said.

(Interruption)

ಅಧ್ಯಕ್ಷರು.—ಮಾನ್ಯ ಅಡ್ಯಂತಾಯರವರೇ ನೀವು ಉಪ ಪ್ರಶ್ನೆಯನ್ನು ಮಾತ್ರ ಕೇಳಿ. ನೀವು ಪಾಕಿಸ್ತಾನದ ವಿಷಯವನ್ನು ತೆಗೆಯಬಾರದಾಗಿತ್ತು. ಆದರೂ ಅವರು ಸೌಜನ್ಯದಿಂದ ಉತ್ತರ ಕೊಟ್ಟಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಅಡ್ಯಂತಾಯ ಅವರು ಪಾರ್ಲಿಮೆಂಟಿಗೆ ಹೋಗಿ ಈ ಪ್ರಶ್ನೆಯನ್ನು ಕೇಳಲಿ. ಅಲ್ಲಿ ಸರಿಯಾದ ಉತ್ತರ ಸಿಕ್ಕುತ್ತದೆ.

ನಂಜನಗೂಡಿನಲ್ಲಿರುವ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವುದು.

೧೫೭. ಶ್ರೀ ಡಿ. ಜಯಕುಮಾರ್ (ನಂಜನಗೂಡು).—ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡಿನಲ್ಲಿ ನ್ಯಾಯಾಲಯಕ್ಕಾಗಿ ನಿರ್ಮಿಸಲಾಗುತ್ತಿದ್ದ ಕಟ್ಟಡದ ಕೆಲಸ ಒಂದರೆ ವರ್ಷದ ಹಿಂದೆಯೇ ಪೂರ್ಣಗೊಂಡಿದ್ದರೂ ನ್ಯಾಯಾಲಯವನ್ನು ಸದರಿ ಸ್ಥಳದಲ್ಲಿ ಪ್ರಾರಂಭಿಸದಿರಲು ಕಾರಣಗಳೇನು ?

ಆ) ಈಗಲಾದರೂ ಅಲ್ಲಿ ನ್ಯಾಯಾಲಯವನು ನಡೆಸಲು ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದೇ ?